ಹೌದಾ?' ಎಂದು ಮರುಮಾತು ಹೊಸೆದರು.

ನನ್ನ ಗಂಡ ಮಾತಿನಲ್ಲಿ ಬಲು ಜಾಣ. ಚೆನ್ಮಾತಿನ ಆಸಾಮಿಯೆಂದೇ ಹೆಸರುವಾಸಿ. ಮಾತುಮಾತಿಗೂ ಗಾದೆ ಹುಟ್ಟಿಸುತ್ತಾರೆ. ಮಾತೆಂದರೆ ಅಲಂಕಾರ. ಮಾತೇ ಸಾಕ್ಷಾತ್ಕಾರ. ಪಟ್ಟಾಂಗದಲ್ಲಿ ನಿಸ್ಸೀಮ. ಮದುವೆಮುಂಜಿ ಸಮಾರಂಭಗಳಲ್ಲಿ, ಇನ್ನಿಲ್ಲದ ನೆಂಟರನ್ನು ಕಲೆಹಾಕಿಕೊಂಡು ಸಭೆ ನಡೆಸುತ್ತಾರೆ. ಅಥವಾ, ನೆಂಟರೇ ತಾವಾಗಿ ಬಂದು ಕಲೆಯುತ್ತಾರೆ. ಚುಂಬಕಕ್ಕೆ ಸೋತು ಸೋತು ಮುಂಬರುವ ಮೊಳೆಗಳ ಹಾಗೆ, ಮುತ್ತಿ ಮುತ್ತಿ ಸುತ್ತುವರೆಯುತ್ತಾರೆ. 'ನೀಲಿ... ಏನ್ರೀ ಇದು ಹುಡುಗಾಟ?! ಏಳ್ರೀ ಸಾಕು...' ಎಂದು ಮುನಿದು ಎಬ್ಬಿಸುತ್ತೇನೆ. ಅಬ್ಬರಿಸಿದ್ದೂ ಇದೆ. 'ನಿಮ್ಮ ಮಗಳ ಓರಗೆಯವರದೆಲ್ಲ ಮದುವೆಯಾಯಿತು. ಅವಳ ತಲೆಗೂ ಒಂದಿಷ್ಟು ಅಕ್ಕಿ ಎರೆಸೋ ಬಗ್ಗೆ ಯೋಚನೆ ಮಾಡಿ...' ಆಗಾಗ ಕನಲುತ್ತೇನೆ. 'ಚಿನ್ನೂಗೆ ಕಡಿಮೆ ವಯಸೇನಲ್ಲ... ಇಪ್ಪತ್ತಾರಾಯಿತು. ವಯಸು ತೀರಿದ ಮೇಲೆ ಗಂಡು ಸಿಗೋದು ಕಷ್ಟ ಅಂತ ತಂದೆಯಾದ ನಿಮಗೆ ಅನಿಸೋದಲ್ಲವಾ?' ತಿಳಿಹೇಳುತ್ತೇನೆ. ಕೇಳುತ್ತಾರೆಲ್ಲಿ? ಈ ಮನುಷ್ಯನ ರೀತಿಯೇ ಬೇರೆ. ರಿವಾಜೇ ಬೇರೆ. ನನ್ನ ಮಾತಿಗೆ ತದ್ವಿರುದ್ಧವನ್ನೇ ಆಡುವರು. ಇಲ್ಲಾ, 'ಕನಕ... ಕನಕಾ... ಕಾಯಬೇಕು ಕಾಲ ಕೂಡುವ ತನಕ...' ಎಂದು ಮಣಿಮಣಿಯಾಗಿ ಆಡಿ ನುಣುಚಿಕೊಳ್ಳುವರು.

ಚಿನ್ನುವೂ ಅಪ್ಪನಿಗೆ ತಕ್ಕಂತಿದ್ದಳು. ಮದುವೆ ಕುರಿತ ಆಸಕ್ತಿಯಿರಲಿ, ದೈಹಿಕವಾದ ಸಹಜಾಸ್ಥೆಯೂ ಇಲ್ಲದೆಯೆ ಇದ್ದಳು. 'ಐ ವಿಲ್ ಟ್ರೈ ಡೇಟಿಂಗ್ ಸಮ್‌ಒನ್ ಆಫ್ ಮೈ ಚಾಯ್ಸ್...' ಅನ್ನುವಳು. ತೋರಿಸಿದವರನ್ನೆಲ್ಲ, 'ನೋ... ನಾಟ್ ಮೈ ಟೈಪ್...' ಎಂದು ಅಲ್ಲಗಳೆಯುವಳು. 'ಲಿವಿಂಗ್–ಇನ್ ಮಾಡುತೀನಮ್ಮ... ಎಷ್ಟು ದಿನ ಬೇಕೋ, ಅಥವಾ ನಡೆಯುತ್ತೋ ನಡೆಸಿದರಾಯಿತು...' ಎಂದು ಹುಡುಗಾಟಿಕೆ ನಡೆಸುವಳು. 'ಕಾನ್ಟ್ ಬಿ ಕಮಿಟೆಡ್ ಟು ಅ ಮ್ಯಾನ್... ಜೀವನಪೂರ್ತಿ ಒಬ್ಬನ ಜೊತೆ ಇರೋದಾ? ನೋ ನೋ!' ಎಂದು ಸಮಾಜದ ಸಂಸ್ಕೃತಿಯ ಬದ್ಧತೆಗೆ ವಿರುದ್ಧವಾದುದನ್ನೇ ಆಡುವಳು. 'ಕಂಪ್ಯಾಟಿಬಿಲಿಟಿ ಕಷ್ಟ, ಅಮ್ಮ... ನನ್ನ ಕೊಲೀಗ್ ಪೂಜಾನ ನೋಡು, ಗಂಡನ್ನ ಬಿಟ್ಟುಬಂದು ಅಪ್ಪನ ಮನೇಲಿದ್ದಾಳೆ. ಹೊಂದಾಣಿಕೆಯೇ ಇಲ್ಲವಂತೆ! ಮಾತೆತ್ತಿದರೆ ಜಗಳ ಆಗುತ್ತಂತೆ... ಈಗ ಮೊದಲಿನಂತೆ ಅಲ್ಲಮ್ಮ, ಟೈಮ್ಸ್ ಹ್ಯಾವ್ ಚೇಂಜ್ಡ್...' ಎಂದು ವರಸೆಗೆ ತೊಡಗುವಳು. 'ತಾರಿಣಿ ಇದ್ದಾಳಲ್ಲ... ಅದೇ ನಿನ್ನ ಕಸಿನ್ ಶಾರೀ ಆಂಟಿ ಮಗಳು –ಮೊನ್ನೆ ಮಂತ್ರಿಸ್ಕ್ವೇರಲ್ಲಿ ಸಿಕ್ಕಿದ್ದಳು. ಒಲಿದು ನಲಿದು ಮದುವೆ ಮಾಡಿಕೊಂಡಳಲ್ಲ, ಈಗ ಪಾಡೇ ಬೇಡ ಅಂತಾಳೆ... ಆರು ತಿಂಗಳು ಕೂಡ ಜೊತೇಲಿರಲಿಲ್ಲ ವಂತೆ... ಶಿ ಈಸ್ ಪರ್ಸುಇಂಗ್ ಡಿವೋರ್ಸ್ ನವ್ವ್...' ಹೌಹಾರುವ ಮಾತು ಹೇಳುವಳು.

ಈ ನೀಲಿಯಾದರೂ, ಯಾವೊತ್ತೂ ಮಗಳ ಇಚ್ಛೆಗೆ ವಿರುದ್ಧವಾದುದನ್ನು ನಡೆಸಲಿಲ್ಲ. ಅವಳ ಅನುಮೋದನೆಯಿಲ್ಲದ ಏನನ್ನೂ ಮಾಡಲಿಲ್ಲ... ಮಗಳು ಹೇಳಿದ್ದಕ್ಕೆಲ್ಲ ಅಸ್ತು ತಥಾಸ್ತು! ಅವಳನ್ನು ಹತ್ತು ಕಾಲ ಹೊತ್ತು ಹೆತ್ತವಳು ನಾನು... ತಾಯ್ಮಾತಿಗೆ ಬೆಲೆಯೂ ಇಲ್ಲ. ನೆಲೆ ಮೊದಲೇ ಇಲ್ಲ! ಮಗಳಿಷ್ಟವೇ ತನ್ನಿಷ್ಟವೆಂಬಂತಿದ್ದ ಗಂಡನನ್ನು ಮಣಿಸುವುದಾದರೂ ಹೇಗೆ? ಮನೆಯಲ್ಲಿ ದಿನದಿನವೂ ಅದದೇ ದಾವೆ. ಚಿನ್ನುವಿನ ಮದುವೆಯ ಬಗ್ಗೆ ವ್ಯಾಜ್ಯ. ಇರುವ ಮೂವರು ಎರಡು ಬಣಗಳಲ್ಲಿ ಒಡೆದುಹೋದೆವು; ಯಾವೊತ್ತೂ ಅಪ್ಪ ಮಗಳು ಒಂದು, ಮತ್ತು ನಾನೇ ನಾನಾಗಿ ಇನ್ನೊಂದು. ಮಗಳ ಪರವಾಗಿ ನೀಲಿಯ ವಕಾಲತ್ತು. ನನ್ನ ಪರ ನಾನೇ... ಹೀಗೆ!

ಹೀಗೆಯೇ ಐದಾರು ಸಾಲು ಕಳೆದವು; ನಾನು ಮಗಳ ಮದುವೆ ಕನಸುತ್ತ; ಅಪ್ಪಮಗಳು